**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3499/2021**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | ಪಾರ್ವತಮ್ಮ |
| ಗಂಡನ ಹೆಸರು | **ಮಂಜುನಾಥ** |
| ವಯಸ್ಸು | **40** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಹೊಸೂರು** |

**ದಿನಾಂಕಃ 13-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಆರೋಪಿಗಳು ನನ್ನ ಸಂಬಂಧಿಕರು. ಸುಮಾರು 4 ವರ್ಷಗಳ ಹಿಂದೆ ಬೆಳಗ್ಗೆ 10.30 ರಿಂದ 10.50ರ ಸಮಯದಲ್ಲಿ ಉಳುವೆ ಮಾಡುತ್ತಿದ್ದಾಗ ನನ್ನನ್ನು ಹಿಡಿದುಕೊಂಡು ದೊಣ್ಣೆಯಿಂದ ಹೊಡೆದು ನನ್ನ ಬಟ್ಟೆಯನ್ನು ಹರಿದು ಹಾಕಿದರು. ನನಗೆ ಕಾಲಿನಿಂದ ಹೊಡೆದು ಕೆಳಗೆ ಬೀಳಿಸಿದರು. ಆರೋಪಿಗಳು ನನಗೆ, ನನ್ನ ತಂದೆಯಾದ ಚಾಸಾ-2ರವರಿಗೆ ಮತ್ತು ಹಸುಗಳಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಈಗ ಸಾಕ್ಷಿಗೆ ಒಂದು ದೊಣ್ಣೆಯನ್ನು ತೋರಿಸಿದ್ದು, ಅದರಿಂದ ಆರೋಪಿಗಳು ನನ್ನ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ಸದರಿ ದೊಣ್ಣೆಯನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ನಿಪಿ-1ರ ಆಧಾರದ ಮೇಲೆ ಪೋಲೀಸರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿದರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಚಾಸಾ-2 ಮತ್ತು 3ರವರು ಹಾಜರಿದ್ದರು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ದೊಣ್ಣೆಯನ್ನು ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.17-08-2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನೀವು, ಚಾಸ-2ರವರು ನಿಮ್ಮ ಮಕ್ಕಳೊಂದಿಗೆ ಹೊಲದಲ್ಲಿ ಕೆಲಸವನ್ನು ಮಾಡುತ್ತಿದ್ದಾಗ ಆರೋಪಿಗಳು ನೀವು ಉಳುವೆ ಮಾಡುತ್ತಿದ್ದ ಹೊಲದ ಬಳಿ ಬಂದು ನಿನಗೆ ಇಲ್ಲಿ ಉಳುವೆ ಮಾಡಲು ಯಾರು ಹೇಳಿದ್ದು ಅಂತ ಜಗಳ ತೆಗೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2ನೇ ಆರೋಪಿಯು ದೊಣ್ಣೆಯಿಂದ ಚಾಸಾ-2ರವರ ಎಡಗೈ ಮತ್ತು ಕುತ್ತಿಗೆಯ ಬಳಿ ಬೆನ್ನಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮಗೂ ಸಹ 2ನೇ ಆರೋಪಿಯು ಅದೇ ದೊಣ್ಣೆಯಿಂದ ಸೊಂಟಕ್ಕೆ , ಬಲತೊಡೆಗೆ ಹಾಗೂ ಬೆನ್ನಿನ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿ ರಕ್ತಗಾಯ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಉಳುವೆ ಮಾಡಿಸುತ್ತಿದ್ದ ಹಸುಗಳಿಗೂ ಸಹ ಅದೇ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಅರೋಪಿಯು ನಿಮಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಯಾವ ಆಸ್ತಿಯನ್ನು ಕೊಡಬೇಕು ಎಂದು ಹೇಳಿ ಕೆಳಗೆ ತಳ್ಳಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 5ನೇ ಆರೋಪಿಯು ನಿಮ್ಮ ಬಟ್ಟೆಯನ್ನು ಹಿಡಿದು ಎಳೆದಾಡಿ ಅಪಮಾನ ಮಾಡಿದ್ದರು, ನಂತರ 3 ಮತ್ತು 4ನೇ ಆರೋಪಿಗಳು ಅವರ ಕೈಗಳಿಂದ ನಿಮ್ಮ ಮೈ ಮೇಲೆ ಹೊಡೆದು ನೋವುಂಟು ಮಾಡಿದರು

ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹತ್ತಿರದ ಆಸ್ಪತ್ರೆಗೆ ಹೋದಾಗ ಅವರು ಬೆಂಗಳೂರಿನ ಆಸ್ಪತ್ರೆಗೆ ಹೋಗುವಂತೆ ಸೂಚಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.18-08-2021ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನಿಮಗೆ, ಚಾಸಾ-4 ಮತ್ತು 5ರವರಿಗೆ ನೋಟಿಸ್ ನ್ನು ನೀಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನೋಟಿಸನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟಿಸ್ ನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅದೇ ದಿನ ಬೆಳಗ್ಗೆ 10.30 ರಿಂದ 11.15 ಗಂಟೆ ಸಮಯದವರೆಗೆ ನೀವು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-4 ಮತ್ತು 5ರವರ ಸಹಿಯನ್ನು ಪಡೆದುಕೊಂಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.18-08-2021 ರಂದು ನೀವು ನಿಮ್ಮ ಮುಂದುವರೆದ ಹೇಳಿಕೆಯಲ್ಲಿ ಚಾಸಾ-3ರವರು ಸದರಿ ಕೃತ್ಯವನ್ನು ಕಣ್ಣಾರೆ ನೋಡಿರುತ್ತಾರೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ನಿಮ್ಮ ಮುಂದುವರೆದ ಹೇಳಿಕೆಯಲ್ಲಿ ಮುಮ್ಮೆನಹಳ್ಳಿ ಗ್ರಾಮದ ಸರ್ವೆ ನಂ. 82/2ರಲ್ಲಿ 3 ಎಕರೆ ಜಮೀನನ್ನು ನಿಮ್ಮ 3 ಜನ ಮಕ್ಕಳಿಗೆ ಸಮವಾಗಿ ಹಂಚಿದ್ದು, ಅದರಲ್ಲಿ ನಿಮ್ಮ ಯಜಮಾನರವರ ಪಾಲಿಗೆ ಒಂದು ಎಕರೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯವು ನಡೆದು ಸುಮಾರು 4 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಎಂ.ವಿ. ಎಸ್, ವಕೀಲರಿಂದಃ-**

**01.**ನನ್ನ ಯಜಮಾನರು ಮೃತಪಟ್ಟ ನಂತರ ನಾನು ಹೊಸೂರಿನಲ್ಲಿಯೇ ವಾಸಿಸುತ್ತಿದ್ದೇನು. ಗಲಾಟೆ ನಡೆಯುವ ಸಮಯದಲ್ಲಿ ಸುಮಾರು 10 ಜನರು ಇದ್ದರು. ಅವರ ಹೆಸರುಗಳು ಆಂಜನಪ್ಪ, ಕಿಟ್ಟಪ್ಪ, ನರಸಿಂಹಯ್ಯ ಮತ್ತು ಅವರ ಹೆಂಡತಿ, ಮುತ್ತಮ್ಮ ಮತ್ತು ಕೃಷ್ಣಪ್ಪನವರ ಮಕ್ಕಳು ಇದ್ದರು. ಸದರಿ ಕೃತ್ಯದಿಂದ ನನ್ನ ಮತ್ತು

ಚಾಸಾ-2ರವರ ಬಟ್ಟೆಗೆ ರಕ್ತದ ಕಲೆ ಆಗಿರುತ್ತದೆ. ಸದರಿ ಬಟ್ಟೆಯನ್ನು ನಾನು ಪೋಲೀಸರಿಗೆ ನೀಡಿರುವುದಿಲ್ಲ. ನಾನು ಬರವಣಿಗೆಯ ಮುಖಾಂತರ ಪೋಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ನಿಪಿ-1ರಲ್ಲಿ ನನ್ನ ಮಾಂಗಲ್ಯ ಸರ, ತಾಳಿ ಮತ್ತು 6 ಗುಂಡುಗಳನ್ನು ಆರೋಪಿಗಳು ಕಿತ್ತುಗೊಂಡು ಹೋದರು ಎಂದು ಹೇಳಿರುತ್ತೇನೆ.

2. ನಿಪಿ-1ರಲ್ಲಿ ನಾನು ವಿಭಾಗ ಆಗಿರುತ್ತದೆ ಮತ್ತು ಅದರಂತೆ ನಮಗೆ 1 ಎಕರೆ ಜಮೀನು ಬಂದಿದೆ ಎಂದು ಹೇಳಿರುತ್ತೇನೆ. ನಾನು ಯಾವುದೇ ಭಾಗವನ್ನು ಮಾಡಿಕೊಂಡಿರುವುದಿಲ್ಲ. ನೀವು ನಿಪಿ-1ರಲ್ಲಿ ವಿಭಾಗ ಆಗಿದೆ ಮತ್ತು ಅದರಂತೆ ನಿಮಗೆ ಒಂದು ಎಕರೆ ಜಮೀನು ಬಂದಿದೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1ರಲ್ಲಿ ಬರೆದಿರುವ ಸದರಿ ವಿಷಯವು ಸುಳ್ಳಿನಿಂದ ಕೂಡಿರುತ್ತದೆ. ನನಗೆ ನಿಪಿ-1ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನೀವು ಓ. ಎಸ್ ಸಂ. 230/2019ರಂತೆ ಆಸ್ತಿಯಲ್ಲಿ ಭಾಗವನ್ನು ಕೋರಿ ಆರೋಪಿಗಳ ವಿರುದ್ದ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಿಭಾಗದ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಮತ್ತು ಆರೋಪಿಗಳ ನಡುವೆ ಮನಸ್ತಾಪ ಇದೆ ಮತ್ತು ನಿಮ್ಮ ಮತ್ತು ಅವರ ನಡುವೆ ಯಾವುದೇ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಯಾವುದೇ ಜಮೀನನ್ನು ವ್ಯವಸಾಯ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹೇಳುವ ಹಾಗೆ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಮತ್ತು ಆರೋಪಿಗಳ ನಡುವೆ ಮನಸ್ತಾಪ ಇರುವ ಕಾರಣದಿಂದ ನೀವು ಆರೋಪಿಗಳ ವಿರುದ್ದ ನಿಪಿ-1ರಂತೆ ಸುಳ್ಳು ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

3. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ವಶಪಡಿಸಿಕೊಂಡಿರುವ ಮುದ್ದೆಮಾಲು-1ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಮುದ್ದೆ ಮಾಲು-1ರ ರೀತಿಯ ದೊಣ್ಣೆಗಳು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಿಗುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮುದ್ದೆ ಮಾಲು-1ರ

ಮೇಲೆ ಯಾವುದೇ ವಿಶೇಷ ಗುರುತುಗಳು ಇರುವುದಿಲ್ಲ. ಮುದ್ದೆ ಮಾಲು-1 ಸುಮಾರು 4 ಅಡಿಗಳ ಉದ್ದ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪೋಲೀಸರು ನಿಪಿ-3ರಂತೆ ನಿಮಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ, ಅವರು ಸ್ಥಳಕ್ಕೂ ಬಂದಿರುವುದಿಲ್ಲ ಮತ್ತು ನಿಪಿ-2ರಂತೆ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮುದ್ದೆ ಮಾಲು-1ನ್ನು ಪೋಲೀಸರಿಗೆ ನಾನೇ ನೀಡಿರುತ್ತೇನೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3499/2021**
**ಚಾಸಾ - 02 / ಪ್ರಾಸಾ - 02**

| | |
|---|---|
| ಹೆಸರು | **ನರಸೇಗೌಡ** |
| ತಂದೆಯ ಹೆಸರು | **ರಾಮಯ್ಯ** |
| ವಯಸ್ಸು | **70** |
| ಉದ್ಯೋಗ | ವ್ಯವಸಾಯ |
| ವಿಳಾಸ | ರಾಜನಪಾಳ್ಯ |

**ದಿನಾಂಕಃ 13-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1ರವರು ನನ್ನ ಮಗಳು. ಆರೋಪಿಗಳು ನನ್ನ ಸಂಬಂಧಿಕರು. ಚಾಸಾ-1ರವರಿಗೆ ಅವರ ಗಂಡನ ಮನೆಯಿಂದ ಏನನ್ನೂ ಸಹ ನೀಡಿರುವುದಿಲ್ಲ. ಸುಮಾರು 4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1ರವರು ಹೊಲವನ್ನು ಉಳುವೆ ಮಾಡಲು ಹೋದಾಗ ನಮಗೆ ದೊಣ್ಣೆಯಿಂದ ಹೊಡೆದು ಕಳುಹಿಸಿರುತ್ತಾರೆ. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದರಿಂದ ಆರೋಪಿಗಳು ನಿಮ್ಮ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಗಳು ಇನ್ನೂ ದಪ್ಪದ ದೊಣ್ಣೆಯಿಂದ ಹಲ್ಲೆಯನ್ನು ಮಾಡಿದರು ಎನ್ನುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಚಾಸಾ-1ರವರನ್ನು 17 ವರ್ಷಗಳ ಹಿಂದೆ ಹೊಸೂರು ಗ್ರಾಮದ 1ನೇ ಆರೋಪಿಯ ಮಗನಾದ ಮಂಜುನಾಥ್ ರವರಿಗೆ ಕೊಟ್ಟು ಮದುವೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.29-09-2018 ರಂದು ನಿಮ್ಮ

ಅಳಿಯನವರು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಆರೋಪಿಗೆ ಮುಮ್ಮೆನಹಳ್ಳಿ ಗ್ರಾಮದ ಸರ್ವೆ ನಂ. 82/2ರಲ್ಲಿ ಜಮೀನು ಇದ್ದು ಸದರಿ ಜಮೀನನ್ನು 1ನೇ ಆರೋಪಿಯು ಅವರ 3 ಜನ ಮಕ್ಕಳಿಗೆ ಸಮನಾಗಿ ಹಂಚಿದ್ದು, ಅದರಂತೆ ನಿಮ್ಮ ಅಳಿಯನವರ ಪಾಲಿಗೆ ಸ್ವಲ್ಪ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಅಳಿಯನ ಪಾಲಿಗೆ ಬಂದಿದ್ದ ಜಮೀನಿನಲ್ಲಿ ಚಾಸಾ-1ರವರು ಬೇಸಾಯವನ್ನು ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ದಿ.17-08-2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನೀವು, ಚಾಸಾ-1 ಮತ್ತು ಅವರ ಮಕ್ಕಳೊಂದಿಗೆ ಹೊಲದಲ್ಲಿ ಕೆಲಸವನ್ನು ಮಾಡುತ್ತಿದ್ದಾಗ ಆರೋಪಿಗಳು ನೀವು ಉಳುವೆ ಮಾಡುತ್ತಿದ್ದ ಹೊಲದ ಬಳಿ ಬಂದು ನಿನಗೆ ಇಲ್ಲಿ ಉಳುವೆ ಮಾಡಲು ಯಾರು ಹೇಳಿದ್ದು ಅಂತ ಜಗಳ ತೆಗೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2ನೇ ಆರೋಪಿಯು ದೊಣ್ಣೆಯಿಂದ ನಿಮ್ಮ ಎಡಗೈ ಮತ್ತು ಕುತ್ತಿಗೆಯ ಬಳಿ ಬೆನ್ನಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1ರವರಿಗೂ ಸಹ 2ನೇ ಆರೋಪಿಯು ಅದೇ ದೊಣ್ಣೆಯಿಂದ ಸೊಂಟಕ್ಕೆ, ಬಲತೊಡೆಗೆ ಹಾಗೂ ಬೆನ್ನಿನ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿ ರಕ್ತಗಾಯ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಅರೋಪಿಯು ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಯಾವ ಆಸ್ತಿಯನ್ನು ಕೊಡಬೇಕು ಎಂದು ಹೇಳಿ ಕೆಳಗೆ ತಳ್ಳಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 5ನೇ ಆರೋಪಿಯು ಚಾಸಾ-1ರವರ ಬಟ್ಟೆಯನ್ನು ಹಿಡಿದು ಎಳೆದಾಡಿ ಅಪಮಾನ ಮಾಡಿದ್ದರು, ನಂತರ 3 ಮತ್ತು 4ನೇ ಆರೋಪಿಗಳು ಅವರ ಕೈಗಳಿಂದ ಚಾಸಾ-1ರವರ ಮೈ ಮೇಲೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮತ್ತು ಚಾಸಾ-1ರವರು ಮಾಗಡಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದೇ ದೊಣ್ಣೆಯಿಂದ ಆರೋಪಿಗಳು ನಿಮ್ಮ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ ಮತ್ತು ಕೃತ್ಯವು ನಡೆದು ಸುಮಾರು 4 ವರ್ಷ

ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಎಂ.ವಿ. ಎಸ್, ವಕೀಲರಿಂದಃ-**

ಚಾಸಾ-1ರವರು ಓ.ಎಸ್ ಸಂ.230/2019ರಂತೆ ಆಸ್ತಿಯಲ್ಲಿ ಭಾಗವನ್ನು ಕೋರಿ ಆರೋಪಿಗಳ ವಿರುದ್ದ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾವೆಯನ್ನು ಹೂಡಿದ ಕಾರಣ ನೀವು ಇಲ್ಲಿಯವರೆಗೂ ಜಮೀನಿನ ಹತ್ತಿರ ಹೋಗಲು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಅಳಿಯನವರು ಮೃತ ಪಟ್ಟ ನಂತರ ಚಾಸಾ-1ರವರು ನಿಮ್ಮ ಮನೆಯಲ್ಲಿಯೇ ವಾಸ ಮಾಡಿಕೊಂಡು ಕೆಲಸಕ್ಕೆ ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಇದೇ ಮೊದಲ ಬಾರಿಗೆ ನನ್ನ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನೀಡುತ್ತಿದ್ದೇನೆ. ಚಾಸಾ-1ರವರ ಬಳಿ ಯಾವುದೇ ಹಸುಗಳು ಇರುವುದಿಲ್ಲ, ಆದರೆ ನನ್ನ ಬಳಿ ಇದೆ. ಯಾವುದೇ ಗಲಾಟೆ ಆಗದೇ ಇದ್ದರೂ ಆರೋಪಿಗಳಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3499/2021**
**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | ಉಗ್ರಯ್ಯ |
| ತಂದೆಯ ಹೆಸರು | ನರಸಿಂಹಯ್ಯ |
| ವಯಸ್ಸು | 52 |
| ಉದ್ಯೋಗ | ವ್ಯವಸಾಯ |
| ವಿಳಾಸ | ಸಿದ್ದಾಪುರ |

**ದಿನಾಂಕಃ 13-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಆರೋಪಿಗಳು, ಚಾಸಾ-1 ಮತ್ತು 2ರವರು ಗೊತ್ತು. 2021 ನೇ ಇಸವಿಯಲ್ಲಿ ನಾನು ಹೊಸೂರಿನಲ್ಲಿ ಇದ್ದಾಗ ಚಾಸಾ-1ರವರ ಮೇಲೆ ಗಲಾಟೆಯನ್ನು ಮಾಡಿ ದೊಣ್ಣೆಯಿಂದ ಹೊಡೆಯುತ್ತಿದ್ದರು. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದರಿಂದಲೇ ಚಾಸಾ-1ರವರ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.17-08-2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನೀವು ಹೊಸೂರು ಗ್ರಾಮದ 1ನೇ ಆರೋಪಿಯ ಜಮೀನಿನ ಬಳಿ ಹೋಗುತ್ತಿರುವಾಗ ಚಾಸಾ1 ಮತ್ತು 2ರವರು ತಮ್ಮ ಮಕ್ಕಳೊಂದಿಗೆ ಹೊಲದಲ್ಲಿ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಆರೋಪಿಗಳು ಅವರು ಉಳುವೆ ಮಾಡುತ್ತಿದ್ದ ಹೊಲದ ಬಳಿ ಬಂದು ನೀವು ಅಲ್ಲಿ ಉಳುಮೆ ಮಾಡಲು ಯಾರು ಹೇಳಿದ್ದು ಅಂತ ಜಗಳ ತೆಗೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2ನೇ ಆರೋಪಿಯು ದೊಣ್ಣೆಯಿಂದ ಚಾಸಾ-2ರವರ ಎಡಗೈ ಮತ್ತು ಕುತ್ತಿಗೆಯ ಬಳಿ ಬೆನ್ನಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.ಚಾಸಾ-1ರವರಿಗೂ ಸಹ 2ನೇ ಆರೋಪಿಯು ಅದೇ ದೊಣ್ಣೆಯಿಂದ ಸೊಂಟಕ್ಕೆ, ಬಲತೊಡೆಗೆ ಹಾಗೂ ಬೆನ್ನಿನ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿ ರಕ್ತಗಾಯ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಅರೋಪಿಯು ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಯಾವ ಆಸ್ತಿಯನ್ನು ಕೊಡಬೇಕು ಎಂದು ಹೇಳಿ ಕೆಳಗೆ ತಳ್ಳಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 5ನೇ ಆರೋಪಿಯು ಚಾಸಾ-1ರವರ ಬಟ್ಟೆಯನ್ನು ಹಿಡಿದು ಎಳೆದಾಡಿ ಅಪಮಾನ ಮಾಡಿದ್ದರು, ನಂತರ 3 ಮತ್ತು 4ನೇ ಆರೋಪಿಗಳು ಅವರ ಕೈಗಳಿಂದ ಚಾಸಾ-1ರವರ ಮೈ ಮೇಲೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯವು ನಡೆದು ಸುಮಾರು 4 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಎಂ.ವಿ. ಎಸ್, ವಕೀಲರಿಂದಃ-**

ನಮ್ಮ ಗ್ರಾಮದಿಂದ ಹೊಸೂರು ಗ್ರಾಮಕ್ಕೆ ಸುಮಾರು 15 ಕಿ. ಮೀ. ನಷ್ಟು ಅಂತರವಿದೆ. ನಾನು ತಿಪ್ಪಸಂದ್ರ ಹೋಬಳಿಯ ಸಿದ್ದಾಪುರ ಗ್ರಾಮದವನು. ನನಗೆ ಹೊಸೂರು ಗ್ರಾಮ ಮತ್ತು ಅದರ ಅಕ್ಕಪಕ್ಕ ಗ್ರಾಮದಲ್ಲಿ ಯಾವುದೇ ಜಮೀನು ಮತ್ತು ಸಂಬಂಧಿಕರು ಇರುವುದಿಲ್ಲ. ನನಗೆ ಚಾಸಾ-1ರವರ ಪರಿಚಯವಿರುವುದಿಲ್ಲ, ಆದರೆ ಕಳೆದ 12 ವರ್ಷಗಳಿಂದ ಚಾಸಾ-2ರವರ ಪರಿಚಯವಿದೆ. ಕೃತ್ಯ ನಡೆದ ಸಮಯದಲ್ಲಿ ಸುಮಾರು 10 ರಿಂದ 12 ಜನರು ಇದ್ದರು. 1ನೇ ಆರೋಪಿಯು ಮುದ್ದೆ ಮಾಲು-1 ರಿಂದ ಚಾಸಾ-1 ಮತ್ತು 2 ರವರಿಗೆ ಹೊಡೆದಿರುತ್ತಾರೆ ಮತ್ತು ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು,

ಅದು 4 ಅಡಿಗಿಂತ ದೊಡ್ಡದಾದ ದೊಣ್ಣೆಯಾಗಿದೆ ಎಂದರೆ ಸಾಕ್ಷಿಯು ಅದು 4 ಅಡಿ ಇದೆ ಎನ್ನುತ್ತಾರೆ. ಮುದ್ದೆಮಾಲು-1ರ ಮೇಲೆ ಯಾವುದೇ ವಿಶೇಷವಾದ ಗುರುತು ಇರುವುದಿಲ್ಲ ಮತ್ತು ನಾನು ಅದನ್ನು ಸರಿಯಾಗಿ ಗಮನಿಸಿರುವುದಿಲ್ಲ. ಚಾಸಾ-2ರವರ ಬೆನ್ನಿನಿಂದ ರಕ್ತ ಬಂದಿರುತ್ತದೆ ಮತ್ತು ಚಾಸಾ-1ರವರಿಗೂ ಸಹ ರಕ್ತಗಾಯ ಆಗಿರುತ್ತದೆ. ಚಾಸಾ-1 ಮತ್ತು 2ರವರ ಬಟ್ಟೆಗಳ ಮೇಲೆ ರಕ್ತದ ಕಲೆ ಆಗಿರುತ್ತದೆ ಮತ್ತು ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-2ರವರು ನಿಮಗೆ ಪರಿಚಯಸ್ತರಾಗಿರುವ ಕಾರಣದಿಂದ ಯಾವುದೇ ಕೃತ್ಯ ನಡೆಯದೇ ಇದ್ದರೂ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3499/2021**
**ಚಾಸಾ - 04 / ಪ್ರಾಸಾ - 04**

| | |
|---|---|
| ಹೆಸರು | **ಮೋಹನ್ ಕುಮಾರ್** |
| ತಂದೆಯ ಹೆಸರು | **ಹುಚ್ಚಯ್ಯ** |
| ವಯಸ್ಸು | **33** |
| ಉದ್ಯೋಗ | **ಚಾಲಕ** |
| ವಿಳಾಸ | **ಹೊಸೂರು** |

**ದಿನಾಂಕಃ 13-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸುಮಾರು 3 ರಿಂದ 4 ವರ್ಷಗಳ ಹಿಂದೆ ನಾನು ಟೀ ಅಂಗಡಿಯ ಮುಂದೆ ನಿಪಿ-2 ಮತ್ತು 3ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ಪೋಲೀಸರು ನನ್ನನ್ನು ಜಮೀನಿನ ಹತ್ತಿರ ಕರೆದುಕೊಂಡು ಹೋಗಿ ಜಮೀನನ್ನು ತೋರಿಸಿ ವಾಪಸ್ಸು ಕರೆದುಕೂಂಡು ಬಂದು ನಿಪಿ-2 ಮತ್ತು 3ಕ್ಕೆ ಸಹಿಯನ್ನು ಹಾಕಲು ಹೇಳಿದ ಕಾರಣ ನಾನು ನನ್ನ ಸಹಿಯನ್ನು ಮಾಡಿರುತ್ತೇನೆ. ನಿಪಿ-2 ಮತ್ತು 3ಕ್ಕೆ ನನ್ನ ಜೊತೆ ಬೇರೆ ಯಾರೂ ಸಹಿಯನ್ನು ಮಾಡಿದ್ದರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೋಲೀಸರು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.18-08-2021ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನಿಮಗೆ, ಚಾಸಾ-1 ಮತ್ತು 5ರವರಿಗೆ ನಿಪಿ-3ರಂತೆ ನೋಟಿಸ್ ನ್ನು ನೀಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅದೇ ದಿನ ಬೆಳಗ್ಗೆ 10.30 ರಿಂದ 11.15 ಗಂಟೆ ಸಮಯದವರೆಗೆ ಚಾಸಾ-1ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-1 ಮತ್ತು 5ರವರ ಸಹಿಯನ್ನು ಪಡೆದುಕೊಂಡಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಮುದ್ದೆ ಮಾಲು-1 ನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 1ನೇ ಆರೋಪಿಯು ನಿಮ್ಮ ದೊಡ್ಡಪ್ಪನಾಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಎಂ.ವಿ. ಎಸ್, ವಕೀಲರಿಂದಃ-**

ಆರೋಪಿಗಳ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3499/2021**
**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | ಉಗ್ರಯ್ಯ |
| ತಂದೆಯ ಹೆಸರು | ನರಸಿಂಹಯ್ಯ |
| ವಯಸ್ಸು | 52 |
| ಉದ್ಯೋಗ | ವ್ಯವಸಾಯ |
| ವಿಳಾಸ | ಸಿದ್ದಾಪುರ |

**ದಿನಾಂಕಃ 13-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಆರೋಪಿಗಳು, ಚಾಸಾ-1 ಮತ್ತು 2ರವರು ಗೊತ್ತು. 2021 ನೇ ಇಸವಿಯಲ್ಲಿ ನಾನು ಹೊಸೂರಿನಲ್ಲಿ ಇದ್ದಾಗ ಚಾಸಾ-1ರವರ ಮೇಲೆ ಗಲಾಟೆಯನ್ನು ಮಾಡಿ ದೊಣ್ಣೆಯಿಂದ ಹೊಡೆಯುತ್ತಿದ್ದರು. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು, ಅದರಿಂದಲೇ ಚಾಸಾ-1ರವರ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.17-08-2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನೀವು ಹೊಸೂರು ಗ್ರಾಮದ 1ನೇ ಆರೋಪಿಯ ಜಮೀನಿನ ಬಳಿ ಹೋಗುತ್ತಿರುವಾಗ ಚಾಸಾ1 ಮತ್ತು 2ರವರು ತಮ್ಮ ಮಕ್ಕಳೊಂದಿಗೆ ಹೊಲದಲ್ಲಿ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಆರೋಪಿಗಳು ಅವರು ಉಳುವೆ ಮಾಡುತ್ತಿದ್ದ ಹೊಲದ ಬಳಿ ಬಂದು ನೀವು ಅಲ್ಲಿ ಉಳುಮೆ ಮಾಡಲು ಯಾರು ಹೇಳಿದ್ದು ಅಂತ ಜಗಳ ತೆಗೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2ನೇ ಆರೋಪಿಯು ದೊಣ್ಣೆಯಿಂದ ಚಾಸಾ-2ರವರ ಎಡಗೈ ಮತ್ತು ಕುತ್ತಿಗೆಯ ಬಳಿ ಬೆನ್ನಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.ಚಾಸಾ-1ರವರಿಗೂ ಸಹ 2ನೇ ಆರೋಪಿಯು ಅದೇ ದೊಣ್ಣೆಯಿಂದ ಸೊಂಟಕ್ಕೆ, ಬಲತೊಡೆಗೆ ಹಾಗೂ ಬೆನ್ನಿನ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿ ರಕ್ತಗಾಯ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಅರೋಪಿಯು ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಯಾವ ಆಸ್ತಿಯನ್ನು ಕೊಡಬೇಕು ಎಂದು ಹೇಳಿ ಕೆಳಗೆ ತಳ್ಳಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 5ನೇ ಆರೋಪಿಯು ಚಾಸಾ-1ರವರ ಬಟ್ಟೆಯನ್ನು ಹಿಡಿದು ಎಳೆದಾಡಿ ಅಪಮಾನ ಮಾಡಿದ್ದರು, ನಂತರ 3 ಮತ್ತು 4ನೇ ಆರೋಪಿಗಳು ಅವರ ಕೈಗಳಿಂದ ಚಾಸಾ-1ರವರ ಮೈ ಮೇಲೆ ಹೊಡೆದು ನೋವುಂಟು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯವು ನಡೆದು ಸುಮಾರು 4 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಎಂ.ವಿ. ಎಸ್, ವಕೀಲರಿಂದಃ-**

ನಮ್ಮ ಗ್ರಾಮದಿಂದ ಹೊಸೂರು ಗ್ರಾಮಕ್ಕೆ ಸುಮಾರು 15 ಕಿ. ಮೀ. ನಷ್ಟು ಅಂತರವಿದೆ. ನಾನು ತಿಪ್ಪಸಂದ್ರ ಹೋಬಳಿಯ ಸಿದ್ದಾಪುರ ಗ್ರಾಮದವನು. ನನಗೆ ಹೊಸೂರು ಗ್ರಾಮ ಮತ್ತು ಅದರ ಅಕ್ಕಪಕ್ಕ ಗ್ರಾಮದಲ್ಲಿ ಯಾವುದೇ ಜಮೀನು ಮತ್ತು ಸಂಬಂಧಿಕರು ಇರುವುದಿಲ್ಲ. ನನಗೆ ಚಾಸಾ-1ರವರ ಪರಿಚಯವಿರುವುದಿಲ್ಲ, ಆದರೆ ಕಳೆದ 12 ವರ್ಷಗಳಿಂದ ಚಾಸಾ-2ರವರ ಪರಿಚಯವಿದೆ. ಕೃತ್ಯ ನಡೆದ ಸಮಯದಲ್ಲಿ ಸುಮಾರು 10 ರಿಂದ 12 ಜನರು ಇದ್ದರು. 1ನೇ ಆರೋಪಿಯು ಮುದ್ದೆ ಮಾಲು-1 ರಿಂದ ಚಾಸಾ-1 ಮತ್ತು 2 ರವರಿಗೆ ಹೊಡೆದಿರುತ್ತಾರೆ ಮತ್ತು ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಈಗ ಸಾಕ್ಷಿಗೆ ಮುದ್ದೆ ಮಾಲು-1ನ್ನು ತೋರಿಸಿದ್ದು,

ಅದು 4 ಅಡಿಗಿಂತ ದೊಡ್ಡದಾದ ದೊಣ್ಣೆಯಾಗಿದೆ ಎಂದರೆ ಸಾಕ್ಷಿಯು ಅದು 4 ಅಡಿ ಇದೆ ಎನ್ನುತ್ತಾರೆ. ಮುದ್ದೆಮಾಲು-1ರ ಮೇಲೆ ಯಾವುದೇ ವಿಶೇಷವಾದ ಗುರುತು ಇರುವುದಿಲ್ಲ ಮತ್ತು ನಾನು ಅದನ್ನು ಸರಿಯಾಗಿ ಗಮನಿಸಿರುವುದಿಲ್ಲ. ಚಾಸಾ-2ರವರ ಬೆನ್ನಿನಿಂದ ರಕ್ತ ಬಂದಿರುತ್ತದೆ ಮತ್ತು ಚಾಸಾ-1ರವರಿಗೂ ಸಹ ರಕ್ತಗಾಯ ಆಗಿರುತ್ತದೆ. ಚಾಸಾ-1 ಮತ್ತು 2ರವರ ಬಟ್ಟೆಗಳ ಮೇಲೆ ರಕ್ತದ ಕಲೆ ಆಗಿರುತ್ತದೆ ಮತ್ತು ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ-2ರವರು ನಿಮಗೆ ಪರಿಚಯಸ್ತರಾಗಿರುವ ಕಾರಣದಿಂದ ಯಾವುದೇ ಕೃತ್ಯ ನಡೆಯದೇ ಇದ್ದರೂ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**